# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ ಆವರಣ, ಬೆಂಗಳೂರು-56

ಸಂಖ್ಯೆ: ಎಸಿಎ-1/ಚುನಾವಣೆ ಜಾಗೃತಿ ಸಂಘ/ SVEEP/2023-24 ದಿನಾಂಕ:14.07.2023

## ಸುತ್ತೋಲೆ

ವಿಷಯ: 2023-24ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಮತದಾರರ ಸಾಕ್ಷರತಾ (E.L.C) ಮತ್ತು ಚುನಾವಣಾ ಜಾಗೃತಿ ವೇದಿಕೆಯಲ್ಲಿ ಕಾರ್ಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:
1. ಅಪರ ಮುಖ್ಯ ಚುನಾವಣಾಧಿಕಾರಿಗಳಿಂದ ಸ್ವೀಕೃತವಾದ ಸುತ್ತೋಲೆ ಸಂಖ್ಯೆ: ಸಿಆಸುಇ/15/ SVEEP/2023, ದಿನಾಂಕ: 19.06.2023
2. ಭಾರತ ಚುನಾವಣೆ ಆಯೋಗದ ಪತ್ರ ಸಂಖ್ಯೆ: 491/SVEEP-III/ELC (Main)/2022, ದಿನಾಂಕ: 22.06.2023.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 01/08/23

** * **

ಮೇಲ್ಕಂಡ ಉಲ್ಲೇಖಿತ ಪತ್ರದಲ್ಲಿ ಅಪರ ಮುಖ್ಯ ಚುನಾವಣಾಧಿಕಾರಿಗಳು, ಭಾರತ ಚುನಾವಣಾ ಆಯೋಗವು ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ಕಾಲೇಜು / ಸ್ನಾತಕೋತ್ತರ ವಿಭಾಗಗಳಲ್ಲಿ ಮತದಾರ ಜಾಗೃತಿ ವೇದಿಕೆಯನ್ನು ಸ್ಥಾಪಿಸಿ ಚುನಾವಣೆ ಪ್ರಕ್ರಿಯೆಯನ್ನು ಕುರಿತು ಶಿಕ್ಷಕರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳನ್ನೊಳಗೊಂಡ ಮತದಾನ ಹಾಗೂ ಚುನಾವಣೆ ಪ್ರಕ್ರಿಯೆ ಬಗ್ಗೆ ಮತದಾರರಲ್ಲಿ ಜಾಗೃತಿಗೊಳಿಸಲು ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲು ಸೂಚಿಸಿದೆ. ಈ ಸಂದರ್ಭ, ಭಾರತ ಚುನಾವಣೆ ಆಯೋಗದ ಉಲ್ಲೇಖಿತ ಪತ್ರಗಳ ಪ್ರತಿಯನ್ನು ಲಗತ್ತಿಸಿದೆ.

ಭಾರತ ಚುನಾವಣಾ ಅಯೋಗದ ಸೂಚನೆಗಳನುಸಾರ ಅಗತ್ಯ ಕ್ರಮಕೈಗೊಳ್ಳಲು ಹಾಗು ಅನುಷ್ಠಾನ ಸಂಬಂಧಪಟ್ಟ ಮಾಹಿತಿಯನ್ನು ಇಮೇಲ್‌ನಲ್ಲಿ ಮಾತ್ರ ಸಂಕ್ಷಿಪ್ತ ವರದಿಯನ್ನು (ಕನ್ನಡ ಮತ್ತು ಇಂಗ್ಲೀಷ್ ಬಾಷೆಯಲ್ಲಿ ಸಿದ್ದಪಡಿಸಿ Word Document ನಲ್ಲಿ) consveep@gmail.com ಮತ್ತು buelectionenrollement@gmail.com ಇಮೇಲ್ ವಿಳಾಸಕ್ಕೆ ರವಾನಿಸುವಂತೆ ಈ ಸುತ್ತೋಲೆ ಮುಖಾಂತರ ಸಂಯೋಜಿತ ಕಾಲೇಜುಗಳ ಎಲ್ಲಾ ಪ್ರಾಂಶುಪಾರುಗಳಿಗೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷಕರಿಗೆ ತಿಳಿಸಲಾಗಿದೆ.

ಆದೇಶಾನುಸಾರ

31/7/23

ಕುಲಸಚಿವರು

ಗೆ,

ಪ್ರಾಂಶುಪಾಲರುಗಳು, ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಸ್ನಾತಕ ಕಾಲೇಜುಗಳು,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಪ್ರತಿಗಳು:

1. ಡಾ. ಎನ್. ಸತೀಶ್ ಗೌಡ, ಸಹ ಪ್ರಾಧ್ಯಾಪಕರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯ SVEEP ನೋಡಲ್ ಅಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056.
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ), ಹಾಗೂ ಆಪ್ತ ಸಹಾಯಕರು, ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056.
3. ಸಿಸ್ಟಮ್ ಅನಾಲಿಸ್ಟ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056 ಬೆಂ.ವಿ.ವಿ. ಜಾಲತಾಣದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4. ಕಛೇರಿ ಪ್ರತಿ.